ಇಂದು ದಿನಾಂಕಃ 15.01.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಗಳ ಪರ ಶ್ರೀ ಕೆ.ಬಿ.ಬಿ. ವಕೀಲರಿಂದಃ

1. ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಅರಿವಿದೆ. ಸದರಿ ಪ್ರಮಾಣ ಪತ್ರಿಕೆಯನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮನೆಗೂ ಮತ್ತು ಮಲ್ಲೇಶಪ್ಪ ಲಿಂಗನಗೌಡ್ರ ಅವರ ಮನೆಗೂ ಸುಮಾರು 100 ಅಡಿಗಳ ಅಂತರ ಇದೆ. ಮಲ್ಲೇಶಪ್ಪ ಲಿಂಗನಗೌಡ್ರ ಅವರಿಗೆ ಸೇರಿದ ವಾಸಿಸುವ ಮನೆ ಇತ್ತು. ಸದರಿ ಮನೆಯಲ್ಲಿ ಮಲ್ಲೇಶಪ್ಪ ಅವರ ದೊಡ್ಡಪ್ಪ ಅವರು ವಾಸಿಸುತ್ತಿದ್ದಾರೆ. ಸಾಕ್ಷಿಯು ಮುಂದುವರೆದು ಸದರಿ ಮನೆಗೆ ವಾದಿಯರು ಕಾಲ ಕಾಲಕ್ಕೆ ಹೋಗಿ ಬಂದು ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ವಾದಿಯರಿಗೂ ಕೂಡ ಹಕ್ಕು ಇದೆ ಎಂದರೆ ಸರಿ.

2. ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ಮಲ್ಲೇಶಪ್ಪ ಅವರ ದೊಡ್ಡಪ್ಪ ಇರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಮನೆಯ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಮಲ್ಲೇಶಪ್ಪ ಲಿಂಗನಗೌಡ್ರ ಅವರನ್ನು ನೋಡಿರುತ್ತೇನೆ. ಸಾಕ್ಷಿಗೆ ಪ್ರತಿವಾದಿಗಳ ಪರ ವಕೀಲರು ದಿನಾಂಕಃ 06.12.2006 ನೇ ಇಸವಿಯ ಕ್ರಯ ಪತ್ರದಲ್ಲಿರುವ ಮಲ್ಲೇಶಪ್ಪ ತಂದೆ ಈರಪ್ಪ ಲಿಂಗನಗೌಡ್ರ ಅವರ ಛಾಯಾಚಿತ್ರವನ್ನು ತೋರಿಸಿದ್ದು ಸದರಿ ಛಾಯಾಚಿತ್ರವು ಮಲ್ಲೇಶಪ್ಪ ಅವರ ಛಾಯಾಚಿತ್ರವೆಂದು ಒಪ್ಪಿಕೊಂಡಿರುತ್ತಾರೆ ಆದ್ದರಿಂದ ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು.

3. ಮೃತ ಮಲ್ಲೇಶಪ್ಪ ಅವರಿಂದ 2 ನೇ ಪ್ರತಿವಾದಿಯು ಯಾವಾಗ ಖರೀದಿ ಮಾಡಿರುತ್ತಾರೆ ಎಂದು ತಿಳಿದಿರುತ್ತಿದೆಯಾ ಎಂಬ ವಕೀಲರ ಸೂಚನೆಗೆ ಸಾಕ್ಷಿಯು ಮಲ್ಲೇಶಪ್ಪ ಅವರು ಯಾವುದೇ ಖರೀದಿ ಪತ್ರವನ್ನು ಬರದುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ 1 ನೇ ವಾದಿಯು ಪ್ರಸ್ತುತ ಹುಬ್ಬಳ್ಳಿಯಲ್ಲಿ ವಾಸವಾಗಿದ್ದಾರೆ. 2 ಮತ್ತು 3 ನೇ ವಾದಿಯರು ಕೂಡ ಹುಬ್ಬಳ್ಳಿಯಲ್ಲಿಯೇ ವಾಸವಿದ್ದಾರೆ. 1 ನೇ ಪ್ರತಿವಾದಿಯು ಕೂಡ ಹುಬ್ಬಳ್ಳಿಯಲ್ಲಿಯೇ ವಾಸವಿದ್ದಾರೆ. 1 ನೇ ಪ್ರತಿವಾದಿಯು ಆಕೆಯ ಮಕ್ಕಳೊಂದಿಗೆ ವಾಸವಾಗಿದ್ದಾರೆ. ಮೃತ ಮಲ್ಲೇಶಪ್ಪ ಅವರು ತಮ್ಮ ಕಡೆಯ ದಿನಗಳಲ್ಲಿ ವಾದಿಯರು ಮತ್ತು 1 ನೇ ಪ್ರತಿವಾದಿಯ ಜೊತೆ ವಾಸವಾಗಿದ್ದರು. ವಾದಿಯರು ಹುಬ್ಬಳ್ಳಿಯ ಯಾವ ಸ್ಥಳದಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. 2 ನೇ ವಾದಿಯು ಹುಬ್ಬಳ್ಳಿಯ ನವನಗರ, ಪಂಚಾಕ್ಷರ ನಗರದಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 3 ನೇ ವಾದಿಯು ಹುಬ್ಬಳ್ಳಿಯ ಉಣಕಲ್ಲ ಕ್ರಾಸ್‌ನಲ್ಲಿ

ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮಲ್ಲೇಶಪ್ಪ ಅವರು ಹುಬ್ಬಳ್ಳಿಯ ಆನಂದ ನಗರದ ಕೃಷ್ಣಾ ಕಾಲೇನಿ, ಕುಷ್ಟ ರೋಗ ಆಸ್ಪತ್ರೆ ರಸ್ತೆ, ಕುಂಚಿಕೋರ ಓಣಿಯ ಕರಿಯಮ್ಮನ ಗುಡಿ ಹತ್ತಿರ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ಥಳದಲ್ಲಿಯೇ ಮಲ್ಲೇಶಪ್ಪ ಅವರು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ನಾನು ಮಲ್ಲೇಶಪ್ಪ ಅವರು ಮೃತಪಡುವ ಸುಮಾರು 15 ವರ್ಷಗಳ ಪೂರ್ವದಿಂದಲೇ ನೋಡಿ ಪರಿಚಯವಿತ್ತು. 15 ವರ್ಷಗಳ ಹಿಂದೆ ನೋಡಿದ ನಂತರ ನಾನು ಅವರನ್ನು ನಂತರದಲ್ಲಿ ಭೇಟಿಯಾಗಿರುವುದಿಲ್ಲ. 2006 ನೇ ಇಸವಿಯಲ್ಲಿ ಮೃತ ಮಲ್ಲೇಶಪ್ಪ 2 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಖರೀದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-2 ರಂತೆ ಖರೀದಿ ಪತ್ರವಾದ ನಂತರ 2 ನೇ ಪ್ರತಿವಾದಿಯೇ ದಾವಾ ಆಸ್ತಿಯನ್ನು ಸ್ವಾಧೀನದಲ್ಲಿಟ್ಟುಕೊಂಡು ವಹಿವಾಟು ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 2 ನೇ ವಾದಿಯೇ ಫಸಲುಗಳನ್ನು ಬೆಳೆದು ವಹಿವಾಟು ಮಾಡುತ್ತಿರುತ್ತಾರೆ. ಆದರೆ ಹೊಲವನ್ನು ಯಾರು ಬಿತ್ತನೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಮಲ್ಲೇಶಪ್ಪ ಅವರು ತಮ್ಮ ಕಡೆಯ ದಿನಗಳಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮಲ್ಲೇಶಪ್ಪ ಅವರು ತಮ್ಮ ಮಕ್ಕಳ ಮದುವೆಯನ್ನು ಮಾಡಲು ಹಾಗೂ ತನ್ನ ಅನಾರೋಗ್ಯಕ್ಕೆ ಚಿಕಿತ್ಸೆಗಾಗಿ ಹಣಕಾಸಿನ ಅವಶ್ಯಕತೆ ಇದ್ದುದ್ದರಿಂದ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಲ್ಲೇಶಪ್ಪ ಅವರು ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಷಯ ನನಗೆ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಮಲ್ಲೇಶಪ್ಪ ಅವರು 2 ನೇ ಮದುವೆಯನ್ನು ಆಗಿರುತ್ತಾರೆ ಎಂದರೆ ಸರಿಯಲ್ಲ. ಮಲ್ಲೇಶಪ್ಪ ಅವರು 2 ನೇ ವಿವಾಹವಾಗಿದ್ದು ಅವರಿಗೆ ಬಂಗಾರೆಪ್ಪ ಎನ್ನುವ ಮಗ ಇದ್ದಾರೆ ಎಂದರೆ ಸರಿಯಲ್ಲ. ಮಲ್ಲೇಶಪ್ಪ ಅವರಿಗೆ 2 ನೇ ಹೆಂಡತಿ ಇದ್ದು ಮತ್ತು 2 ನೇ ಮದುವೆಯಿಂದ ಜನಿಸಿದ ಸದರಿ ಬಂಗಾರೆಪ್ಪ ಎನ್ನುವ ಮಗನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಮಲ್ಲೇಶಪ್ಪ ಅವರು ಎಂದಿಗೂ ಸಹ ತನ್ನ ಮೊದಲನೆ ಹೆಂಡತಿಯಾದ 1 ನೇ ಪ್ರತಿವಾದಿ ಮತ್ತು ವಾದಿಯರೊಂದಿಗೆ ವಾಸವಾಗಿಲ್ಲ ಎಂದರೆ ಸರಿಯಲ್ಲ. ಮಲ್ಲೇಶಪ್ಪ ಅವರು ತನ್ನ 2 ನೇ ಹೆಂಡತಿಯಾದ ನಾಗಮ್ಮ ಮತ್ತು ಹಾಗೂ ಮಗನಾದ ಬಂಗಾರೆಪ್ಪ ಅವರೊಂದಿಗೆ ವಾಸವಾಗಿದ್ದರು ಎಂದರೆ ಸಾಕ್ಷಿಯು ಮಲ್ಲೇಶಪ್ಪ ಅವರು 2 ನೇ ಮದುವೆಯನ್ನೇ ಆಗಿಲ್ಲ ಎಂದು ನುಡಿಯುತ್ತಾರೆ.

ಮಲ್ಲೇಶಪ್ಪ ಅವರು 2 ನೇ ಮದುವೆಯಾಗಿರುವ ವಿಚಾರ ಗೊತ್ತಿದ್ದು ಅದೇ ರೀತಿ ದಾವಾ ಆಸ್ತಿಯನ್ನು ಅವರು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಷಯವು ನನಗೆ ಗೊತ್ತಿದ್ದರೂ ಸಹ ವಾದಿಗಳಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.